# ಅಮ್ಮನ ತಬ್ಬಿದ ಕಂದ



ಬೆಂಗಳೂರಿನ ಲಾಲ್‌ಬಾಗ್‌ನಲ್ಲಿರುವ ಬೋನ್ಸಾಯ್ ಗಾರ್ಡನ್‌ನಲ್ಲಿ ಬೆಳೆದಿರುವ ಈ ಮರದ ಬುಡದಲ್ಲಿನ ಸಹಜ ರಚನೆ ಇತ್ತೀಚೆಗೆ ನನ್ನನ್ನು ಆಕರ್ಷಿಸಿತು. ಮಗುವೊಂದು ತನ್ನ ಅಮ್ಮನನ್ನೋ ಅಪ್ಪನನ್ನೋ ತನ್ನ ತೋಳ್ಬಳಸಿ ಬಿಗಿಯಾಗಿ ಅಪ್ಪಿಕೊಂಡು ಯಾವುದಕ್ಕೋ ಅಂಗಲಾಚುತ್ತಿರುವಂತಿದೆ. ತನ್ನ ನೀಳವಾದ ತೋಳುಗಳಿಂದ ಮಗುವೊಂದು ತನ್ನ ಹೆತ್ತವರನ್ನು ತಬ್ಬಿಕೊಂಡು ನಿನ್ನಾಸರೆಯಲ್ಲೇ ನಾ ಜೀವಿಸುವೆ, ನಿನ್ನ ನೆರಳಲ್ಲೇ ನಾನು ಬದುಕುವೆನೆಂತಲೋ, ಈ ಮಾನವರಿಂದ ನಮ್ಮನ್ನು ರಕ್ಷಿಸು ಎಂದೋ ನೆರವಿಗಾಗಿ, ಆಸರೆಗಾಗಿ, ಗೋಗರೆಯುತ್ತಿರುವಂತಿದೆ ಈ ರೂಪ. ಪ್ರಕೃತಿಯೂ ಕಲೆಗಾರ ಎನ್ನುವುದಕ್ಕೆ ಈ ಕಲಾಕೃತಿಯೊಂದು ಉದಾಹರಣೆಯಷ್ಟೆ.

—ಎಡ್ವರ್ಡ್ ಚಿಲ್ಲಾಳ್, ಬೆಂಗಳೂರು

# ಸಹಸ್ರಮಾನದ ವೀರಗಲ್ಲು

ಕಾರ್ಗಿಲ್ ಯುದ್ಧದಲ್ಲಿ ವೀರಮರಣ ಹೊಂದಿದ ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ ಚೊಳಚಗುಡ್ಡ ಗ್ರಾಮದ ಶಿವಬಸಯ್ಯ ಬ. ಕುಲಕರ್ಣಿ ಅವರ ಸ್ಮರಣಾರ್ಥ ಸ್ಥಾಪಿಸಿದ ವೀರಗಲ್ಲು ಮೂರುಹಂತದ ವಿಶೇಷ ಕೆತ್ತನೆಯನ್ನು ಒಳಗೊಂಡಿದೆ. ಮೊದಲನೇ ಹಂತದಲ್ಲಿ ಯುದ್ಧಮಾಡುತ್ತಿರುವ ಚಿತ್ರಣವಿದೆ. ಎರಡನೇ ಹಂತದಲ್ಲಿ ಹೋರಾಡಿ ವೀರಮರಣ ಅಪ್ಪುವ ಸಂದರ್ಭ. ಮೂರನೇ ಹಂತ ವೀರಸ್ವರ್ಗ ಸೇರುವ ಸ್ಥಿತಿಯನ್ನು ಚಿತ್ರಿಸಲಾಗಿದೆ. ಎರಡು ದಶದ ಹಿಂದೆ ನಡೆದ ಯುದ್ಧದ ಸಂದರ್ಭದಲ್ಲಿ ಹುತಾತ್ಮನಾದ ಹೊಂದಿದ ಯೋಧನ ನೆನಪನ್ನು ಚಿರಾಯುವಗಿಸುವ ವೀರಗಲ್ಲು ಇದು.

—ಮಹಾಂತೇಶ ಬಾಗೇವಾಡಿ, ಚೊಳಚಗುಡ್ಡ





# ಮಾಯಾಜಿಂಕೆ ಸಂಹಾರ

ರಾಮಾಯಣಕ್ಕೂ ಮಲೆನಾಡಿಗೂ ಅವಿನಾಭಾವ ಸಂಬಂಧ. ಇಲ್ಲಿನ ಬಹುತೇಕ ಎಲ್ಲ ಊರಿಗೂ, ಕಲ್ಲುಗಳಿಗೂ, ದೇವಾಲಯಗಳಿಗೂ ರಾಮಾಯಣ ಸಂಬಂಧಿಸಿದ ಕಥೆಗಳು ಇವೆ. ಹೊಸನಗರ ತಾಲ್ಲೂಕಿನ ಬಿಲ್ಲೇಶ್ವರದಲ್ಲಿ ಶ್ರೀರಾಮ ಮಾಯಾಮೃಗ ಸಂಹಾರಕ್ಕಾಗಿ ಬಿಲ್ಲೆತ್ತಿದನೆಂದೂ, ಸಮೀಪದ ಅಂಬುತೀರ್ಥದಲ್ಲಿ ಬಿಲ್ಲುಹೊರಬಂದಿತೆಂದೂ ತೀರ್ಥಹಳ್ಳಿ ಸಮೀಪದ ಮೃಗವಧೆಯಲ್ಲಿ ಮಾಯಾಮೃಗ ವಧೆಯಾಯಿತೆಂದೂ ದಂತಕತೆ ಇದೆ. ಈ ಮೂರೂ ಸ್ಥಳಗಳಲ್ಲಿ ಶ್ರೀರಾಮ ಸ್ಥಾಪಿಸಿದನೆಂದು ನಂಬಿರುವ ಈಶ್ವರ ದೇವಾಲಯಗಳಿವೆ. ಬಿಲ್ಲೇಶ್ವರ ದೇವಾಲಯದ ಬಾಗಿಲಿನಲ್ಲಿ ಮಾಯಾಮೃಗ ಸಂಹಾರದ ಚಿತ್ರವನ್ನು ಬಿಡಿಸಲಾಗಿದೆ. ಸಾಗರದ ಗುಡಿಗಾರರ ಕೈಚಳಕದಲ್ಲಿ ಸುಂದರವಾಗಿ ಮೂಡಿಬಂದಿದೆ.

—ಎಸ್. ಅನ್ವಿತಾ, ಹುಂಚ